ನೇತ್ಯಾತ್ಮಕ ಪ್ರಭಾವದ ಬಗ್ಗೆ ಅವರು ಅರವಿಂದರ ಬಗ್ಗೆ ಬರೆದ 'ಮಹಾ ಪ್ರಸ್ಥಾನ' ಪದ್ಯ ಹಾಗೂ 'ಪೆರುಮಾಳನ ಕೆಂದಾವರೆ' ಪದ್ಯ ನೆನಪಾಗುತ್ತವೆ. ಇನ್ನೊಂದು ಕಾರಣವೆಂದರೆ, ಬೇಂದ್ರೆ ಅವರ ಜೀವನದಲ್ಲಿ ಆಗಿರಬಹುದಾದ ಏರುಪೇರುಗಳು. ವಿಶ್ವಾಸಾರ್ಹವಾದ ಜೀವನ ಚರಿತ್ರೆಗಳು ಕನ್ನಡಕ್ಕೆ ಅವಶ್ಯಕವೆಂದು ರಘುನಂದನ ಹೇಳುತ್ತಾರೆ. ವಾಮನ ಬೇಂದ್ರೆಯವರು ಬೇಂದ್ರೆ ಪದ್ಯಗಳಿಗೆ ನೀಡಿದ ಭಾವ ಸಂದರ್ಭಗಳು, ವಿವರಣೆಗಳು ಹಾಗೂ 'ಪುಟಬಂಗಾರ' ಸಂಪುಟದಲ್ಲಿ ಬರೆದಿರುವ ಬೇಂದ್ರೆ ಪದ್ಯಗಳ ವ್ಯಾಖ್ಯಾನಗಳು ಸಮರ್ಪಕವಾಗಿಲ್ಲ. ಹಾಗೆಯೇ ಅವರ ಆಪ್ತವಲಯದ ಶಿಷ್ಯರು ಬರೆದ ವ್ಯಾಖ್ಯಾನಗಳು ಕೂಡ. ಮೂಲ ಸಮಸ್ಯೆಯೆಂದರೆ ಇವರುಗಳಿಗೆ ಕಾವ್ಯವನ್ನು ಓದಲು ಬರುವುದಿಲ್ಲ.

ಎಲಿಯಟ್‌ನ ಪ್ರಭಾವಿ ಪ್ರಬಂಧದ ಆಚೆಗೆ metaphysical ಕಾವ್ಯದ ಬಗ್ಗೆ ಅನೇಕ ವ್ಯಾಖ್ಯಾನಗಳಿವೆ. 'Dissociation of Sensibility' ಎಂಬ ಅವನ ಪರಿಕಲ್ಪನೆಯ ಬಗ್ಗೆ ಅನೇಕರು ಒಪ್ಪುವುದಿಲ್ಲ. ಒಂದು ಮಾತು ನಿಜ. 19ನೇ ಶತಮಾನದ ಶ್ರೇಷ್ಠ ರೊಮ್ಯಾಂಟಿಕ್ ಕಾವ್ಯದ ನಂತರ ಇಂಗ್ಲಿಷ್ ಕಾವ್ಯ ಸೊರಗಿ ಹೋಯಿತು. ಅತಿ ಭಾವುಕತೆ ಅಥವಾ ಶುಷ್ಕ ವೈಚಾರಿಕತೆಯ ನಡುವೆ ಕಾವ್ಯ ಕಳೆದುಹೋಯಿತು. ಹೀಗಾಗಿ ಎಲಿಯಟ್ ಹೇಳಿದಂತೆ ಅವನ ತಲೆಮಾರಿನವರು ಬರೆಯಲು ಬಯಸಿದ ಕಾವ್ಯ ಇಂಗ್ಲಿಷ್‌ನಲ್ಲಿ ಇರಲೇ ಇಲ್ಲ. ಅದು ಫ್ರೆಂಚ್ ಭಾಷೆಯಲ್ಲಿ ಇತ್ತು. ಮುಂದೆ ಅದೇ ಬಗೆಯ ಕಾವ್ಯವನ್ನು ಅವನು 17ನೇ ಶತಮಾನದ metaphysical ಕಾವ್ಯದಲ್ಲಿ ಗುರುತಿಸಿದ. ಎಜ್ರಾ ಪೌಂಡ್ (Ezra Pound) ಯೂರೋಪಿನ ಆಚೆಗೆ ಅದನ್ನು ಗುರುತಿಸಿದ. ಪ್ರಶ್ನೆಯೆಂದರೆ, ಕನ್ನಡ ಕಾವ್ಯ ಸಂಪ್ರದಾಯವು ಯಾವ ಸ್ಥಿತಿಯಲ್ಲಿ 1940-50ರ ಆಸುಪಾಸಿನಲ್ಲಿ ಇತ್ತು? ನವ್ಯ ಕಾವ್ಯವು Anglo-American ನವ್ಯ ಕಾವ್ಯದ ಅನುಕರಣೆಯಿಂದ ಆರಂಭವಾಯಿತೆ? ಒಂದು ಕಾಲದಲ್ಲಿ ಕುರ್ತಕೋಟಿಯವರು ವಾದಿಸಿದಂತೆ, ನವ್ಯತೆಗೆ ಬೇಕಾದ ಸಾಮಾಜಿಕ-ಸಾಂಸ್ಕೃತಿಕ ಸಂದರ್ಭಗಳು ಇಲ್ಲಿ ಇರಲಿಲ್ಲವೆನ್ನಬಹುದೆ? ಅಥವಾ ನವೋದಯ ಕಾವ್ಯದ ಅವನತಿಯೊಂದಿಗೆ ಇಲ್ಲಿಯೂ ಸಂವೇದನೆಯಲ್ಲಿ ವಿಘಟನೆಯಾಗಿತ್ತೆ? ಇವು ತುಂಬಾ ಸಂಕೀರ್ಣ ಪ್ರಶ್ನೆಗಳು, ಹೀಗೇ ವಿಶ್ಲೇಷಿಸಬೇಕು ಎಂದು ರಘುನಂದನ ಒತ್ತಾಯಿಸುವುದಿಲ್ಲ. ಅವರ ಒಟ್ಟು ಚಿಂತನೆಯ ಹರಹು ವಿಶಾಲವಾಗಿದೆ. ಯೂರೋಪಿನ ಆಧುನಿಕತೆ, ಆಧುನಿಕ ವಿಜ್ಞಾನ ಅಲ್ಲಿಯ 20ನೇ ಶತಮಾನದ ರಾಜಕೀಯ, ಹೀಗೆ ಅನೇಕ ವಿಷಯಗಳ ಬಗ್ಗೆ ಆಳವಾದ ಚಿಂತನೆ ಇಲ್ಲಿದೆ. ಅದರ ಪರಿಣಾಮಗಳ ಬಗ್ಗೆ ಕೂಡ. ಹೀಗಾಗಿ ಲೋಕ ಮೀಮಾಂಸೆಯು ರಘುನಂದನ ಅವರನ್ನು ಇಂದಿನ ನಮ್ಮ ಸಂದರ್ಭದ ಮೀಮಾಂಸೆಯತ್ತ ಕರೆದೊಯ್ಯುತ್ತದೆ.

ಇಪ್ಪತ್ತನೇಯ ಶತಮಾನದ ನಾಜಿವಾದ, ಫ್ಯಾಸಿಸಂ, ಇವುಗಳಿಂದ ಇಂದಿನ ಕಾಳ ಕಗ್ಗತ್ತಲಿನ ನಮ್ಮ ದೇಶದ ಬಗ್ಗೆ ಅವರ ಚಿಂತನೆ ಹರಡಿದೆ. ಅವರ ಕಾಳಜಿ ಇರುವುದು ಅಧಿಕಾರಸ್ಥ ರಾಜಕಾರಣಕ್ಕಿಂತ ಆ ರಾಜಕೀಯಕ್ಕೆ ಬುನಾದಿಯಾಗುವ ವೈಚಾರಿಕ ಚೌಕಟ್ಟುಗಳ ಬಗ್ಗೆ. metaphysicsನ ಹೆಸರಿನಲ್ಲಿ, ಸನಾತನತೆಯ ಹೆಸರಿನಲ್ಲಿ ನಮ್ಮೆದುರಿನ ವಾಸ್ತವಗಳನ್ನು ನೋಡದೇ ಇರುವ ಪ್ರವೃತ್ತಿಯ ಬಗ್ಗೆ ಅವರಿಗೆ ಆತಂಕವಿದೆ. ಅತಿಯಾದ rationalism ಬಗ್ಗೆ ಶಂಕೆಗಳಿದ್ದಂತೆ, ಅತಿ ಭಾವುಕತೆಯ ಬಗ್ಗೆಯೂ ಚಿಂತೆ ಇದೆ. ಕೃತಿಯಲ್ಲಿ ಅನೇಕ ಕಡೆಗೆ ಅಸೂಕ್ಷ್ಮವಾದ ಲಿಂಗತ್ವ ಧೋರಣೆಗಳ ಬಗ್ಗೆ ಮುಕ್ತವಾದ ಟೀಕೆ ಇದೆ. ಅದು ಬಸವನ ವಚನದಲ್ಲಿದ್ದರೂ ವಿಮರ್ಶೆಗೆ ಒಳಗಾಗುತ್ತದೆ. ಇದೆಲ್ಲವನ್ನು ಕಾವ್ಯಮೀಮಾಂಸೆಯ ಪರಿಧಿಗೆ ತಂದಿರುವುದು ಅರ್ಥಪೂರ್ಣವಾಗಿದೆ.

ಬೇಂದ್ರೆ ಕವಿತೆಗಳು, ಜಾನ್ ಡನ್‌ನ ಕವಿತೆ, ಹೀಗೆ ಅನೇಕ ಕವಿತೆಗಳು ರಘುನಂದನ ಅವರ ಬಹುಸೂಕ್ಷ್ಮವಾದ ಓದಿಗೆ ಒಳಗಾಗುತ್ತವೆ. ಬಹಳ ದಿನಗಳ ನಂತರ ಯಾಂತ್ರಿಕವಲ್ಲದ ಪ್ರಾಯೋಗಿಕ ವಿಮರ್ಶೆಯನ್ನು ಓದುವ ಖುಷಿ ಈ ಕೃತಿಯ ಭಾಗಗಳಿಂದ ದೊರೆಯುತ್ತದೆ.

ಈ ಕೃತಿ ಒಂದು ಸಂಭಾಷಣೆಯ ಶುರುವಾತಾಗಿದೆ. ಏಕೆಂದರೆ ಅದು ಒಳಗೊಳ್ಳುವ ವಿಷಯಗಳು ಒಂದು ಓದಿಗೆ ಮುಗಿಯುವಂಥವಲ್ಲ. ಈ ಸಂಭಾಷಣೆಯಲ್ಲಿ ಪಾಲುಗೊಳ್ಳುವುದು ತುಂಬಾ ತೃಪ್ತಿಕೊಡುವ ವಿದ್ಯಮಾನವಾಗಿದೆ.

●